A.—Sri ALUR HANUMANTHAPPA (Deputy Minister for Minor Irrigation).—

(*a*) 2.
(*b*) Nil.
(*c*) Yes.

ಸ್ವಾಮೀ, (ಬಿ)ಗೆ ಉತ್ತರವಾಗಿ, ಇತ್ತೀಚೆಗೆ 7ನೇ ಜುಲೈ 1967ರಲ್ಲಿ ಅಂಗರಗಟ್ಟಿ ಕೆಲಸಕ್ಕೆ 6,81,000 ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ.

ಶ್ರೀ ಎಂ. ಜಿ. ಬಣಕಾರ್.—ನಾಲ್ಕನೇ ಯೋಜನೆ ಅವಧಿಯಲ್ಲಿ ಈ ಕೆಲಸವನ್ನು ಮುಕ್ತಾಯ ಗೊಳಿಸುತ್ತೀರಾ ಸ್ವಾಮಿ ?

†ಶ್ರೀ ಆಲೂರು ಹನುಮಂತಪ್ಪ.—ತೀವ್ರತೆಯಿಂದ ನೀರಾವರಿ ಕೆಲಸ ಮುಗಿಯಬೇಕು ಎನ್ನುವುದೇ ಸರ್ಕಾರದ ಉದ್ದೇಶ.

ಶ್ರೀ ಎಂ. ಜಿ. ಬಣಕಾರ್.—ಬ್ಯಡಗಿ ತಾಲ್ಲೂಕಿನಲ್ಲಿ ಹೊಳೆ ಹಳ್ಳಗಳಿಲ್ಲದೆ ಯಾವುದೇ ರೀತಿಯ ನೀರಾವರಿ ಸೌಲಭ್ಯವಿಲ್ಲದೆ ಇರುವ ಕಾರಣಕ್ಕಾಗಿ ಆದಷ್ಟು ಜಾಗ್ರತೆ—ಹಿಂದೆ ಎರಡು ಸಣ್ಣ ಕೆರೆಗಳ ನಿರ್ಮಾಣವಾಗಬೇಕಾದರೆ 20 ವರ್ಷ ಹಿಡಿಯಿತು. ಆರು ಲಕ್ಷ ರೂಪಾಯಿನ ಕೆಲಸ 60 ವರ್ಷದ ವರೆಗೂ ಹೋಗಬಾರದು—ಈ ಕೆಲಸವನ್ನು ಪೂರೈಸುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೇ ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಹೇಳತಕ್ಕ ಅಭಿಪ್ರಾಯ ಬಹಳ ನೂಕ್ಕ ವಾದುದು. ಕೆಲವು ಸಂದರ್ಭಗಳಲ್ಲಿ ನೀರಾವರಿಯಿಂದ ಮುಳುಗಡೆಯಾಗತಕ್ಕ ಪ್ರದೇಶದ ಜನರ ಅಡಚಣೆಗಳಿಂದ ತಡವಾಗುತ್ತದೆ. ಇತ್ತೀಚೆಗೆ ಸರ್ಕಾರದವರು ಮಂಜೂರು ಮಾಡಿರುವ ಕೆಲಸ ಗಳಿಗೆ ಹೆಚ್ಚಿನ ಅಧ್ಯತೆಯನ್ನು ಕೊಟ್ಟು, ಹೆಚ್ಚಿನ ಹಣ ಒದಗಿಸಿ ಆದಷ್ಟು ತೀವ್ರತೆಯಿಂದ ಅವು ಗಳನ್ನು ಮುಗಿಸಬೇಕು ಎಂದು ಆದೇಶವನ್ನು ಸರ್ಕಾರದವರು ಕೊಟ್ಟಿದ್ದಾರೆ.

ಶ್ರೀ ಎಂ. ಜಿ. ಬಣಕಾರ್.—ಈ ಕೆರೆ ನಿರ್ಮಾಣದ ಬಗ್ಗೆ ಜಮೀನು ಮಾಲೀಕರುಗಳಿಂದ ಏನಾದರೂ ತಮಗೆ ಅಡತಡೆ ಬಂದಿದೆಯೇ, ಸ್ವಾಮಿ ?

ಶ್ರೀ ಆಲೂರು ಹನುಮಂಪ್ಪ.—ಇದುವರೆಗೂ ಇದರಲ್ಲಿ ಯಾವ ಅಂಥ ಅಡಚಣೆಗಳೂ ಬಂದಿಲ್ಲ.

Teaching Grants to the Defunct District Board

* *Q*.—442. Sri M. M. J. SADYOJATHA (Kudligi).—

Will the Minister for Education be plased to state :—

(*a*) whether it is a fact that the Government is releasing Teaching Grant to the Defunct District Board, once in three months ;

(*b*) if so, whether Government would reconsider the release of Teaching grant before the commencement of the academic year ?

A.—Sri K. V. SHANKARA GOWDA (Minister for Education).—

(*a*) Yes.

(*b*) This is being examined.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಮೂರು ತಿಂಗಳಿಗೆ ಒಂದು ಗ್ರಾಂಟ್ ರಿಲೀಸ್ ಮಾಡುತ್ತಿರುವುದರಿಂದ ಬಡ ಉಪಾಧ್ಯಾಯರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎ. ಶಂಕರ ಗೌಡ.—ಕೆಲವು ನಂದರ್ಭಗಳಲ್ಲಿ ಅನುದಾನ ಕೊಡುವುದರಲ್ಲಿ ನಿಧಾನ ವಾಗಿದೆ. ಇದಕ್ಕೆ ಎರಡು ಮೂರು ಕಾರಣಗಳುಂಟು. ಸಾಧ್ಯವಾದಷ್ಟುಮಟ್ಟಿಗೆ ಇದನ್ನು ನಿವಾರಿಸುವುದಕ್ಕೆ ಪ್ರಯತ್ನ ಮಾಡುತ್ತೀದ್ದೇವೆ.

ಶ್ರೀ ಎಂ. ಎಂ. ಜೆ. ನದ್ಯೋಜಾತ.—ಶೈಕ್ಷಣಿಕ ಸಾಲು ಪ್ರಾರಂಭವಾಗುವುದರೊಳಗೆ ಗ್ರಾಂಟ್ ರಿಲೀಸ್ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಎ. ಶಂಕರೇಗೌಡ.—ಈ ಪ್ರಶ್ನೆ ನರ್ಕಾರದ ಪರಿಶೀಲನೆಯಲ್ಲಿದೆ ಸ್ವಾಮಿ.

ಶ್ರೀ ಎನ್. ಎಂ. ಕೊಟ್ರಬನಯ್ಯ ಸೋಗಿ.—ಬಳ್ಳಾರಿ ಡೀಫಂಕ್ಟ್ ಡಿಸ್ಟ್ರಿಕ್ಟ್ ಬೋರ್ಡ್ ಆದಳಿತದಲ್ಲಿ ಆರ್ಥಿಕ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಅಲ್ಲಿ ಆಫೀಸಿನಲ್ಲಿ ಕೆಲವು ಸಿಬ್ಬಂದಿ ಸಹಿತ ಇಲ್ಲ, ಶಾಲಾಮಾಸ್ತರುಗಳ ನಂಬಳ, ಇಂಕ್ರಿಮೆಂಟ್, ಅರಿಯರ್ಸ್ ಮುಂತಾದುವೆಲ್ಲಾ ನರಿಯಾಗಿ ವ್ಯವಸ್ಥೆ ಆಗುತ್ತಿಲ್ಲ. ಇದಕ್ಕೆ ರಾಜ್ಯದ ವಿವಿಧ ಭಾಗಗಳಲ್ಲಿರುವಂತೆ ಇಲ್ಲಿಯೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಕೆ. ಎ. ಶಂಕರ ಗೌಡ.—ನಂಬಳವನ್ನು ತಾರೀಖಿಗೆ ನರಿಯಾಗಿ ಕೊಡುತ್ತಿಲ್ಲ ಎನ್ನುವ ದೂರು ಇದೆ. ಅದಕ್ಕೆ ಅಡ್ಮಿನಿಸ್ಟ್ರೇಟಿವ್ ಆಫೀಸರಿಂದ ಸ್ಟೇಟ್‌ಮೆಂಟ್ ಬರತಕ್ಕದ್ದು ನಿಧಾನವಾಗುತ್ತಿದೆ, ಕೆಲವು ವೇಳೆ ಆಕೌಂಟ್ಸ್ ಆಡಿಟ್ ಮಾಡತಕ್ಕದ್ದು ನಿಧಾನವಾಗಿದೆ ಮತ್ತು ಮದ್ರಾಸ್ ರೂಲ್ಸ್‌ನಂತೆ ಈಗ ನಂಬಳವನ್ನು ಕೊಡಲಾಗುತ್ತಿರುವುದರಿಂದ ಆ ರೂಲ್ಸ್ ಪ್ರಕಾರ ಸ್ವಲ್ಪ ಸುತ್ತಿ ಬಳಸಿ ಬರತಕ್ಕ ಪರಿಸ್ಥಿತಿಯಾಗಿದೆ. ಈ ಕಾರಣಕ್ಕಾಗಿ ನಂಬಳ ಕೊಡತಕ್ಕುದು ನಿಧಾನವಾಗಿದೆ. ಇನ್‌ಕ್ರಿಮೆಂಟ್ ವಗೈರೆ ವಿಷಯಗಳಲ್ಲಿ ಅಂಥ ತೊಂದರೆ ಏನೂ ಇಲ್ಲ. ಇದನ್ನು ಕೂಡ ನಿವಾರಣೆ ಮಾಡುವುದಕ್ಕೆ ನೂಕ್ತ ಪರಿಹಾರೋಪಾಯಗಳನ್ನು ನರಕಾರ ಕಂಡುಹಿಡಿಯುತ್ತಿದೆ.

ಶ್ರೀ ಎನ್. ಎಂ. ಕೊಟ್ರಬನಯ್ಯ ಸೋಗಿ.—ರಾಜ್ಯದ ಬೇರೆ ಭಾಗಗಳಲ್ಲಿರುವಂತೆ ಬಳ್ಳಾರಿ ಜಿಲ್ಲೆಯಲ್ಲಿಯೂ ಪ್ರಾಥಮಿಕ ಶಾಲೆಗಳನ್ನು ನರ್ಕಾರ ವಹಿಸಿಕೊಳ್ಳುವ ವಿಚಾರ ಮಾಡುತ್ತೀರಾ ?

ಶ್ರೀ ಕೆ. ಎ. ಶಂಕರ ಗೌಡ.—ಅದನ್ನು ಕೂಡ ನರ್ಕಾರ ಪರಿಶೀಲಿಸುತ್ತಿದೆ.

Kukkasamudra Tank

*Q.—384. Sri K. M. THAMMIAH (Kadur).—

Will the Minister for Public Works be pleased to state :—

(*a*) whether any estimate has been prepared to repair Kukkasamudra Tank in Kadur Taluk ;

(*b*) if so, the amount of the estimate ;

(*c*) whether the same has been sanctioned ;

(*d*) if not, whether they would sanction the estimate and take up the work early ?

A.—Sri ALUR HANUMANTHAPPA (Deputy Minister for Minor Irrigation).—

(*a*) No.

(*b*), (*c*), and (*d*). Does not arise in view of the reply to clause (*a*).

ಶ್ರೀ ಕೆ. ಎಂ. ತಮ್ಮಯ್ಯ.—ಕುಕ್ಕನಮುದ್ರ ಕೆರೆ 1,500 ಎಕರೆಗಳಷ್ಟಿದ್ದು ಪೊದಲು ಬಂದಿದ್ದುದು ಈಗ ಧತ್ತಿಯಂತಾಗಿ, ಅಜೂಬಾಜು ಏಳೆಂಟು ಹಳ್ಳಿಗಳು ಅಗಾಗ್ಗೆ ನೆಳ ಬಡ ರಾವಣಿಯಾಗುತ್ತಿರುವುದು ನರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ !